# The Karnataka Bank Ltd.

Your Family Bank. Across India.

(Regd. & Head Office, Mahaveera Circle, Kankanady, Mangaluru - 575 002)
E-mail : investor.grievance@ktkbank.com, website : www.karnatakabank.com
Phone No.: 0824-2228222, Fax No. : 0824-2225588 CIN : L85110KA1924PLC001128

# 96TH ANNUAL GENERAL MEETING (AGM) TO BE HELD OVER VIDEO CONFERENCE

1. Owing to COVID19 related lockdown and restriction on movement of persons at several places in the country, the Ministry of Corporate Affairs (MCA) issued General Circulars viz. 14/2020 dated 08.04.2020, 17/2020 dated 13.04.2020 and 20/2020 dated 05.05.2020, wherein, **companies have been directed to hold Annual General Meetings through Video Conference (VC) or Other Audio Visual Means (OAVM) only and also advised to disseminate Notice of the AGM and Annual Report for financial year 2019-2020 via email only to all the Members to their registered email.** The Securities Exchange Board of India (SEBI) vide its circular SEBI/HO/CFD/ CMD1/CIR/ P/2020/79 dated May12, 2020 had also granted relaxation to listed entities in the similar manner.

2. Therefore, Members of the Bank may please note that the **96th Annual General Meeting of the Bank (96th AGM) is scheduled to be held on Friday, July 17, 2020 at 11:30 a.m. IST only through Video Conference (VC) or Other Audio Visual Means (OAVM)** in compliance with applicable provision of the Companies Act, 2013, SEBI (Listing Obligations and Disclosure Requirements), Regulations, 2015, read with above mentioned Circulars issued by the Ministry of Corporate Affairs (MCA) and SEBI, to transact the business that will be set forth in the Notice of 96th AGM.

3. Accordingly, the Notice of the **96th AGM along with the Annual Report for Financial Year 2019-20 will be sent to the Members through electronic means only** in accordance with the applicable laws. Further, the Notice and the Annual Report will also be made available on the Bank's website: www.karnatakabank.com/investor portal and on the websites of stock exchanges in due course.

4. Therefore, we request the **Members of the Bank to register their E-mail-Ids & Mobile Numbers immediately** either with Bank's Registrar & Share Transfer Agent or their respective Depository Participant (DP) in the following manner:

| | |
|---|---|
| **a. For the shares held in physical form** | The aforesaid details shall be registered with Bank's R&TA-Integrated Registry Management Services Pvt. Ltd. at irg@integratedindia.in by quoting Folio number. |
| **b. For the shares held in electronic form (i.e. Demat)** | The aforesaid details shall be updated with the concerned DP where the Demat account is maintained. |

5. Members of the Bank will be given an opportunity to cast their vote on the businesses as set forth in the Notice of 96th AGM either through **(i) remote e-voting before the date of AGM or (ii) e-voting during the 96th AGM.** The manner of voting remotely for the Members of the Bank holding shares in dematerialized mode and physical mode will be provided in the Notice. The details will also be made available on the website of the Bank. Members of the Bank are requested to visit www.karnatakabank.com/investor portal to obtain such details.

6. RBI vide circular DOR.BP.BC.No.64/21.02.067/2019-20 dated April 17, 2020 has directed the banks not to make any further dividend payout from the profits pertaining to the financial year ended March 31, 2020 until further instructions which may please be noted.

For The Karnataka Bank Ltd.,
**Prasanna Patil**
Company Secretary

**Place : Mangaluru**
**Date : 11.06.2020**

# ದಿ ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

(ನೋಂದಾಯಿತ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)

ಇ-ಮೇಲ್ : investor.grievance@ktkbank.com, ಕಂಪನಿ ಜಾಲತಾಣ : www.karnatakabank.com

ಫೋನ್ ನಂ. : 08242228222, ಫ್ಯಾಕ್ಸ್ ನಂ.: 08242225588 ಕಂಪನಿ ಗುರುತು ಸಂಖ್ಯೆ : L85110KA1924PLC001128

## 96ನೇ ವಾರ್ಷಿಕ ಮಹಾಸಭೆ (ಎಜಿಎಂ) ಯನ್ನು ವಿದ್ಯುನ್ಮಾನ ಮಾಧ್ಯಮದ (VC or OAVM) ಮೂಲಕ ನಡೆಸುವ ಕುರಿತು

1. ದೇಶದಲ್ಲಿ ಕೋವಿಡ್-19 ಸಾಂಕ್ರಾಮಿಕ ಸಂಬಂಧಿತ ಲಾಕ್‌ಡೌನ್ ಹಾಗೂ ದೇಶಾದ್ಯಂತ ಜಾರಿಯಲ್ಲಿರುವ ಸಂಚಾರ ನಿರ್ಬಂಧಗಳ ಹಿನ್ನೆಲೆಯಲ್ಲಿ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಮಾರ್ಗಸೂಚಿ ಸುತ್ತೋಲೆಗಳನ್ನು ಬಿಡುಗಡೆ ಮಾಡಿದೆ (ಸುತ್ತೋಲೆ ಸಂಖ್ಯೆ 14/2020 ದಿ. 08.04.2020, ಸಂ. 17/2020 ದಿ. 13.04.2020 ಮತ್ತು ಸಂ.20/2020 ದಿ. 05.05.2020). **ಇವುಗಳ ಅನ್ವಯ ಕಂಪನಿಗಳು ತಮ್ಮ ವಾರ್ಷಿಕ ಮಹಾಸಭೆಗಳನ್ನು ವಿದ್ಯುನ್ಮಾನ ಮಾಧ್ಯಮ (ವೀಡಿಯೋ ಕಾನ್ಫರೆನ್ಸ್) ಮೂಲಕ ಅಥವಾ ಇತರ ಆಡಿಯೋ ವಿಶ್ಯುವಲ್ ಮಾಧ್ಯಮಗಳ ಮೂಲಕ (ಓಎವಿಎಂ) ಮಾತ್ರವೇ ನಡೆಸುವಂತೆ ಸೂಚಿಸಲಾಗಿದೆ. ಅಲ್ಲದೆ ವಾರ್ಷಿಕ ಮಹಾಸಭೆಯ ನೋಟೀಸು ಮತ್ತು 2019-2020ನೇ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಇ-ಮೇಲ್ ಮೂಲಕ ಮಾತ್ರ ಎಲ್ಲ ಸದಸ್ಯರಿಗೆ ಅವರ ನೋಂದಾಯಿತ ಇ-ಮೇಲ್‌ಗಳಿಗೆ ಕಳುಹಿಸತಕ್ಕದ್ದು ಎಂದು ಸಲಹೆ ನೀಡಿದೆ.** ಭಾರತೀಯ ಸೆಕ್ಯುರಿಟಿ ಎಕ್ಸ್‌ಚೇಂಜ್ ಬೋರ್ಡ್ (ಸೆಬಿ) ಕೂಡ ಮೇ 12, 2020ರಂದು ಹೊರಡಿಸಿದ ಸುತ್ತೋಲೆಯಲ್ಲಿ (ಸುತ್ತೋಲೆ ಸಂಖ್ಯೆ: SEBI/HO/CFD/ CMD1/CIR/ P/2020/79) ಕಂಪನಿಗಳಿಗೆ ಇದೇ ತೆರನಾದ ರಿಯಾಯಿತಿಗಳನ್ನು ನೀಡಿದೆ.

2. ಈ ಮೂಲಕ ಬ್ಯಾಂಕಿನ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, 2013ರ ಕಂಪನಿಗಳ ಕಾಯ್ದೆಯ ಅಧಿನಿಯಮಗಳು, 2015ರ ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಮಾಹಿತಿ ಬಿಡುಗಡೆ ಅಗತ್ಯಗಳು) ನಿಯಂತ್ರಣ ಅಧಿನಿಯಮಗಳಿಗೆ ಬದ್ಧವಾಗಿ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಸೆಬಿ ಸುತ್ತೋಲೆಗಳನ್ನು ಅನುಸರಿಸಿ **ಬ್ಯಾಂಕಿನ 96ನೇ ವಾರ್ಷಿಕ ಮಹಾಸಭೆಯು (ಎಜಿಎಂ) ಶುಕ್ರವಾರ ದಿನಾಂಕ ಜುಲೈ 17, 2020 ರಂದು ಬೆಳಗ್ಗೆ 11.30ಕ್ಕೆ** ವಿದ್ಯುನ್ಮಾನ ಮಾಧ್ಯಮ (ವೀಡಿಯೋ ಕಾನ್ಫರೆನ್ಸ್) ಅಥವಾ ಇತರ ಆಡಿಯೋ ವಿಶ್ಯುವಲ್ ಮಾಧ್ಯಮದ ಮೂಲಕ ನಡೆಯಲಿದೆ.

3. **ಈ ಮೇಲೆ ಹೇಳಿದಂತೆ, ಸಂಬಂಧಪಟ್ಟ ಕಾನೂನುಗಳಿಗೆ ಅನುಸಾರವಾಗಿ 96ನೇ ವಾರ್ಷಿಕ ಮಹಾಸಭೆ (ಎಜಿಎಂ) ಯ ನೋಟೀಸು ಮತ್ತು 2019-2020ನೇ ಹಣಕಾಸು ವರ್ಷದ ವಾರ್ಷಿಕ ವರದಿಯನ್ನು ಸದಸ್ಯರಿಗೆ ವಿದ್ಯುನ್ಮಾನ ಮಾಧ್ಯಮದ (ಇ-ಮೇಲ್) ಮೂಲಕ ಮಾತ್ರವೇ ರವಾನಿಸಲಾಗುತ್ತದೆ.** ಅಲ್ಲದೇ ನೋಟೀಸು ಮತ್ತು ವಾರ್ಷಿಕ ವರದಿಯು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ (www.karnatakabank.com/investor portal) ಮತ್ತು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ನಲ್ಲೂ ಲಭ್ಯವಿರುತ್ತದೆ.

4. ಆದ್ದರಿಂದ **ಬ್ಯಾಂಕಿನ ಸದಸ್ಯರು ತಮ್ಮ ಇ-ಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಗಳನ್ನು ಕೂಡಲೇ** ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಶೇರು ಟ್ರಾನ್ಸ್‌ಫರ್ ಏಜೆಂಟ್ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟ್ (DP) ಅವರಲ್ಲಿ ಈ ಕೆಳಗೆ ಸೂಚಿಸಿದಂತೆ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ.

| | |
|---|---|
| **ಎ. ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವವರು-** | ಮೇಲೆ ಸೂಚಿಸಿದ ವಿವರಗಳನ್ನು ಬ್ಯಾಂಕಿನ RTA-ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನ ಇ-ಮೇಲ್ irg@integratedindia.in ಮೂಲಕ ಫೋಲಿಯೋ ನಂಬರ್ ಉಲ್ಲೇಖದೊಂದಿಗೆ ನೋಂದಾಯಿಸತಕ್ಕದ್ದು. |
| **ಬಿ. ಎಲೆಕ್ಟ್ರಾನಿಕ್ ರೂಪದಲ್ಲಿ (ಡಿಮ್ಯಾಟ್) ಶೇರುಗಳನ್ನು ಹೊಂದಿರುವವರು-** | ಮೇಲೆ ತಿಳಿಸಿದ ವಿವರಗಳನ್ನು ಡಿಮ್ಯಾಟ್ ಅಕೌಂಟ್‌ಗಳನ್ನು ನಿರ್ವಹಿಸುವ ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್ (DP) ಅವರಲ್ಲಿ ನೋಂದಾಯಿಸತಕ್ಕದ್ದು. |

5. 96ನೇ ವಾರ್ಷಿಕ ಮಹಾಸಭೆಯ ಕಲಾಪಗಳ ಬಗ್ಗೆ ಬ್ಯಾಂಕಿನ ಸದಸ್ಯರಿಗೆ **(i) ವಾರ್ಷಿಕ ಮಹಾಸಭೆ ದಿನಾಂಕದ ಮೊದಲು ರಿಮೋಟ್ ಇ-ವೋಟಿಂಗ್ ಮೂಲಕ** ಅಥವಾ **(ii) ಮಹಾಸಭೆ ಜಾರಿಯಲ್ಲಿರುವ ಸಮಯದಲ್ಲಿ ಇ-ವೋಟಿಂಗ್ ಮೂಲಕ** ಮತ ಚಲಾಯಿಸಲು ಅವಕಾಶ ನೀಡಲಾಗುತ್ತದೆ. ಭೌತಿಕ ಅಥವಾ ಡಿಮ್ಯಾಟ್ ಸ್ವರೂಪದ ಶೇರುಗಳನ್ನು ಹೊಂದಿರುವ ಸದಸ್ಯರು ಮತ ಚಲಾಯಿಸಲು ಅನುಸರಿಸಬೇಕಾದ ಕ್ರಮಗಳನ್ನು ಮಹಾಸಭೆಯ ನೋಟೀಸ್‌ನಲ್ಲಿ ನೀಡಲಾಗುವುದು. ಈ ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಕೂಡಾ ಪ್ರಕಟಿಸಲಾಗುತ್ತದೆ. ಸದಸ್ಯರು www.karnatakabank.com/ investor portal ಗೆ ಭೇಟಿ ನೀಡಿ ವಿವರಗಳನ್ನು ಪಡೆಯಬಹುದಾಗಿದೆ.

6. ಭಾರತೀಯ ರಿಸರ್ವ್ ಬ್ಯಾಂಕ್, ತನ್ನ ಸುತ್ತೋಲೆ ಸಂಖ್ಯೆ DOR.BP.BC.No.64/21.02.067/2019-20 ದಿನಾಂಕ 17.04.2020ರ ಮುಖಾಂತರ ಬ್ಯಾಂಕುಗಳಿಗೆ 31.03.2020 ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಲಾಭಾಂಶವನ್ನು (ಡಿವಿಡೆಂಡ್) ಮುಂದಿನ ಸೂಚನೆಯವರೆಗೆ ಘೋಷಣೆ ಮಾಡದೇ ಇರಲು ನಿರ್ದೇಶಿಸಿರುತ್ತದೆ.

ದಿ ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಪರವಾಗಿ,

**ಪ್ರಸನ್ನ ಪಾಟೀಲ್**

ಕಂಪನಿ ಕಾರ್ಯದರ್ಶಿ

**ಸ್ಥಳ : ಮಂಗಳೂರು**

**ದಿನಾಂಕ : 11.06.2020**